704(960) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ–ಧಾರವಾಡ ನಗರಕ್ಕೆ ಕುಡಿಯುವ ನೀರಿನ ತೊಂದರೆ ನಿವಾರಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮವೇನು;

ಆ) ಮಲಪ್ರಭಾ ಕುಡಿಯುವ ನೀರಿನ 3ನೇ ಹಂತದ ಕಾಮಗಾರಿಗೆ ಸರ್ಕಾರ ಅನುಮತಿ ನೀಡಿದೆಯೇ; ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು; ಇದರ ನೀಲಿ ನಕ್ಷೆ ಸಿದ್ಧವಿದೆಯೇ;

ಇ) ಮಲಪ್ರಭಾ ಕುಡಿಯುವ ನೀರಿನ 3ನೇ ಹಂತದ ಯೋಜನೆ ಅನುಷ್ಠಾನಕ್ಕೆ ತರಲು ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರಲು ಕಾರಣಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಹುಬ್ಬಳ್ಳಿ–ಧಾರವಾಡ ಅವಳಿ ನಗರಕ್ಕೆ ತುರ್ತು ನೀರು ಸರಬರಾಜು ಯೋಜನೆಯನ್ನು ದಿನಾಂಕ 21–8–2004ರಂದು ಅನುಷ್ಠಾನಗೊಳಿಸಲಾಗಿದೆ. ಇದರಿಂದ 20 ಎಂ.ಎಲ್.ಡಿ., ಹೆಚ್ಚುವರಿ ನೀರನ್ನು ಸರಬರಾಜು ಮಾಡಲು ಸಾಧ್ಯವಾಗಿದೆ.

ಅಮ್ಮಿನಭಾವಿಯಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಜಲಶುದ್ದೀಕರಣ ಘಟಕದಿಂದ ನೇರವಾಗಿ ಹುಬ್ಬಳ್ಳಿಗೆ ನೀರನ್ನು ಪಂಪ್ ಮಾಡಲು ಅವಿನಭಾವಿಯಿಂದ ನೃಪತುಂಗ ಬೆಟ್ಟದ ಜಲಸಂಗ್ರಹಾಗಾರದವರೆಗೆ 1168 ಮೀ.ಮೀ. ವ್ಯಾಸದ 23 ಕಿ.ಮೀ.ಉದ್ದ ಕೊಳವೆ ಮಾರ್ಗವನ್ನು ವಿಶ್ವಬ್ಯಾಂಕ್ ನೆರವಿನ ಕ್ವಾಸಿಪ್ (KUWASIP) ಯೋಜನೆಯಡಿಯಲ್ಲಿ ತೆಗೆದುಕೊಂಡಿದ್ದು ಈ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಅವಳಿ ನಗರಗಳಲ್ಲಿ ನೀರು ಸರಬರಾಜು ವಿತರಣಾ ಜಾಲದ ತ್ವರಿತ ಸುಧಾರಣೆಗಾಗಿ ವಿವಿಧ ಭಾಗಗಳಲ್ಲಿ ಸುಮಾರು 25 ಕಿ.ಮೀ.ಉದ್ದದ ವಿವಿಧ ವ್ಯಾಸದ ಪೂರಕ ಕೊಳವೆ ಮಾರ್ಗ ಹಾಗೂ ವಿತರಣಾ ಕೊಳವೆಗಳನ್ನು ಅಳವಡಿಸಲು ಕಾಮಗಾರಿಗಳನ್ನು ವಿಶ್ವಬ್ಯಾಂಕ್ ಕ್ವಾಸಿಪ್ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಭಾಗಶಃ ಚಾಲನೆಗೊಳಿಸಲಾಗಿದೆ.

ಆ) ಮಲಪ್ರಭಾ ಜಲಾಶಯದಿಂದ 3ನೇ ಹಂತದ ಕುಡಿಯುವ ನೀರಿನ ಯೋಜನೆಯ ಅಂದಾಜು 195.00 ಕೋಟಿ ರೂ.ಗಳು ಈ ಯೋಜನೆಯನ್ನು 2006–07ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿದ್ದು, ಇದನ್ನು ವರ್ಷಾಶನ ಪಾವತಿ (Annuity Payment Basis) ಆಧಾರದ ಮೇಲೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನೆಯ ನೀಲಿ ನಕ್ಷೆಯನ್ನು ಮಾಡಲಾಗುತ್ತಿದೆ.

ಇ) ಸದರಿ ಯೋಜನೆಯನ್ನು 2006–07ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿದ್ದು, ಹಾಗೂ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

705(1064) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಪ್ರವಾಸೋದ್ಯಮ ಜವಳಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಿಂದ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬರಬೇಕಾದ ಮೊತ್ತ ಎಷ್ಟು;

ಆ) ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ಎಷ್ಟು ಜನ ನೇಕಾರರು ಕೆಲಸ ಮಾಡುತ್ತಿದ್ದಾರೆ.

ಇ) ಎಲ್ಲಾ ನೇಕಾರರಿಗೂ ಅವರ ಕೆಲಸಕ್ಕೆ ತಕ್ಕಂತೆ ಹಣ ಬಿಡುಗಡೆ ಮಾಡಲಾಗಿದೆಯೇ;

ಈ) ನೇಕಾರರು ಈವರೆಗೂ ಸರ್ಕಾರಕ್ಕೆ ಪೂರೈಸಿದ ಸಮವಸ್ತ್ರಗಳ ಮೊತ್ತ ಎಷ್ಟು;

ಉ) ಸರ್ಕಾರದಿಂದ ನೇಕಾರರಿಗೆ ಬಿಡುಗಡೆ ಮಾಡಿದ ಹಣವೆಷ್ಟು;

ಊ) ಇನ್ನು ಬಾಕಿ ಉಳಿದ ಹಣವೆಷ್ಟು;

ಋ) ಬಾಕಿ ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;

ಎ) ಇದರಿಂದಾಗಿ ನೇಕಾರರ ಜೀವನವು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಏ) ಇಲ್ಲವಾದಲ್ಲಿ ಕಾರಣವೇನು;

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಜವಳಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 1. ವಿದ್ಯಾವಿಕಾಸ ಯೋಜನೆ ರೂ. 39.47 ಕೋಟಿ

2. ದೀನ್‌ದಯಾಳ್ ಹತ್‌ಕರ್ಘಾ ಪ್ರೋತ್ಸಾಹನ ಯೋಜನೆ ರೂ. 10.00 ಕೋಟಿ

3. 2006–07ನೇ ಸಾಲಿನ ಅಗ್ಗದ ದರದ ಸೀರೆ ಪಂಚೆ ವಿತರಣೆ ಯೋಜನೆ ಮುಂಗಡ ರೂ. 2.00 ಕೋಟಿ ರೂ. 51.47 ಕೋಟಿ

ಆ) 31ನೇ ಮಾರ್ಚ್ 2006ರ ಅಂತ್ಯಕ್ಕೆ ಒಟ್ಟು 13124 ನೇಕಾರರು.

ಇ) ಹೌದು.

ಆದರೆ 28.6.2006 ರವರೆಗೆ ನೇಕಾರರು ಉತ್ಪಾದಿಸಿದ ಡಿಸೈನ್‌ಗೆ ತಕ್ಕಂತೆ ರೂ. 20.00 ಲಕ್ಷಗಳ ಪರಿವರ್ತನಾ ಹಣ ಪಾವತಿಸಲು ಬಾಕಿ ಇರುತ್ತದೆ.

ಈ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮುಖಾಂತರ 2006–07ನೇ ಸಾಲಿಗೆ ಒಟ್ಟು ರೂ. 43.45 ಕೋಟಿ ಸಮಸ್ತ್ರ ಒಟ್ಟೆಯನ್ನು ಪೂರೈಸಿದೆ.